ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ

C.C No. 2004/2023
CW- 1 PW-1

ಹೆಸರು : ವಿಶ್ವನಾಥ್ ಪಾಕಳೆ

ತಂದೆ ಹೆಸರು : ಗಣಪತಿ

ವಯಸ್ಸು : 47 ವರ್ಷ

ಉದ್ಯೋಗ : ಪಿ.ಎಸ್.ಐ. ಮಹಾಗಾಂವ್ ಪೋಲೀಸ್ ಠಾಣೆ ಮಹಾಗಾಂವ್

ವಾಸ ಸ್ಥಳ : ಮಹಾಗಾಂವ್

ಪ್ರಮಾಣವಚನ ಭೋಧಿಸಲಾಯಿತು. ದಿಃ 25-11-2025

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ

1. ನಾನು ಕಾಳಗಿ ಪೋಲೀಸ್ ಠಾಣೆಯಲ್ಲಿ 05.02.2023 ರಿಂದ 05.06.2023 ರವರೆಗೆ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 05.05.2023ರಂದು ಮಧ್ಯಾಹ್ನ 02.15 ಗಂಟೆಗೆ ನಾನು ಪೋಲೀಸ್ ಠಾಣೆಯಲ್ಲಿದ್ದಾಗ ಮಂಗಲಗಿ ಗ್ರಾಮದ ಭವಾನಿ ಗುಡಿಯ ಮುಂದೆ ಇರುವ ಸಾರ್ವಜನಿಕ ರಸ್ತೆಯ ಸ್ಥಳದಲ್ಲಿ ಒಬ್ಬ ವ್ಯಕ್ತಿ ಯಾವುದೇ ಸರಕಾರದ ಪರವಾನಗಿ ಇಲ್ಲದೆ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಬಾತ್ಮಿ ಬಂತು. ಸದರಿ ಮಾಹಿತಿಯನ್ನು ನಮ್ಮ ಪೋಲೀಸ್ ಠಾಣಾ ಸಿಬ್ಬಂದಿಗಳಾದ ಚಾಸಾ-4 ಮತ್ತು 5ರವರಿಗೆ ತಿಳಿಸಿ ಚಾಸಾ-5ರವರಿಗೆ ಪಂಚರನ್ನು ಬರಮಾಡಿಕೊಳ್ಳಲು ತಿಳಿಸಿದೆನು. ಆಗ ಚಾಸಾ-5ರವರು ಚಾಸಾ-2 ಮತ್ತು 3 ಪಂಚರನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಬಂದು ಅವರಿಗೆ ನಾನು ಬಾತ್ಮಿ ವಿಷಯ ತಿಳಿಸಿ ಅವರ ಪಂಚರಾಗಲು ಒಪ್ಪಿದ ಮೇರೆಗೆ ನಾನು, ಪಂಚರು ಮತ್ತು ಚಾಸಾ-4 ಮತ್ತು 5ರವರು ಸೇರಿ ಇಲಾಖಾ ವಾಹನದಲ್ಲಿ ಬಾತ್ಮಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ. ನಾವು ಮಧ್ಯಾಹ್ನ 03.00 ಗಂಟೆಗೆ ಮಂಗಲಗಿ ಗ್ರಾಮದ ಸಮೀಪ ಇರುವ ಬ್ರಿಡ್ಜ್ ನ ಹತ್ತಿರ ನಮ್ಮ ಇಲಾಖಾ ವಾಹನವನ್ನು ನಿಲ್ಲಿಸಿ ಅಲ್ಲಿಂದ ನಡೆದುಕೊಂಡು ಭವಾನಿ ಗುಡಿ ಕಂಪೌಂಡ್ ಹತ್ತಿರ ಮಧ್ಯಾಹ್ನ 03.15 ಗಂಟೆಗೆ ತಲುಪಿ ಮರೆಯಾಗಿ ನಿಂತು ನೋಡಿದಾಗ ಆರೋಪಿತನು ಸದರಿ ಗುಡಿಯ ಮುಂದೆ

ಇರುವ ಸಿಸಿ ರಸ್ತೆಯ ಮೇಲೆ ಸಾರ್ವಜನಿಕರಿಂದ ಹಣ ಪಡೆದು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಖಚಿತಪಡಿಸಿಕೊಂಡೆನು.

3. ನಂತರ ಮಧ್ಯಾಹ್ನ 03.30 ಗಂಟೆಗೆ ನಾವು ದಾಳಿ ಮಾಡಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದು ವ್ಯಕ್ತಿಯನ್ನು ಹಿಡಿದು ವಿಚಾರಸಿದಾಗ ಆತ ತನ್ನ ಹೆಸರು ಕಾಶೀನಾಥ್ ತಂದೆ ವೆಂಕಪ್ಪ ಶರಗಾರ್ ಸಾಕೀನ್ ಮಂಗಲಗಿ ಎಂದು ತಿಳಿಸಿದನು. ಆತನ ಬಳಿ ಇರುವ ಮು.ಮಾ. ಗಳನ್ನು ಪರಿಶೀಲಿಸಿದಾಗ ಆತನ ಬಳಿ 68 - 90ಎಮ್ಎಲ್ ನ ಒರಿಜಿನಲ್ ಚಾಯ್ಸ್ ವಿಸ್ಕಿಯ ಪೌಚ್ ಗಳು ಸಿಕ್ಕಿರುತ್ತವೆ. ಸ್ಥಳದಲ್ಲಿಯೇ ಚಾಸಾ- 2 ಮತ್ತು 3ರವರ ಸಮಕ್ಷಮ ಮಧ್ಯಾಹ್ನ 03.30 ಗಂಟೆಯಿಂದ 04.30 ಗಂಟೆಯವರೆಗೆ ಜಪ್ತು ಪಂಚನಾಮೆಯನ್ನು ಜರಗಿಸಿ ಜಪ್ತು ಪಡಿಸಿಕೊಂಡ ಮು.ಮಾ. ಗಳನ್ನು ಮತ್ತು ಆರೋಪಿಯನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಬಂದು ಸಂಜೆ 05.00 ಗಂಟೆಗೆ ಚಾಸಾ-7 ರವರ ಸಮಕ್ಷಮ ನನ್ನ ಸ್ವ ದೂರನ್ನು ಸಲ್ಲಿಸಿರುತ್ತೇನೆ. ಆ ದಿನ ವಶಕ್ಕೆ ಪಡೆದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಇಂದು ಗೈರು ಹಾಜರಿದ್ದು ಆರೋಪಿ ಪರ ವಕೀಲರು ಗುರುತಿಸುವಿಕೆಗೆ ತಕರಾರು ಇದೆ ಎಂದು ನುಡಿದಿರುತ್ತಾರೆ.

4. ನಾನು ನೀಡಿದ ಸ್ವ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ದೂರನ್ನು ನಿಪಿ-1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ಜರಗಿಸಿದ ಜಪ್ತು ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಜಪ್ತು ಪಂಚನಾಮೆಯನ್ನು ನಿಪಿ- 2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಾನು ಜಪ್ತುಪಡಿಸಿಕೊಂಡ ಮು.ಮಾ. ಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದಿರುವ ಬಿಳಿ ಬಟ್ಟೆಯಲ್ಲಿ ಸೀಲ್ ಮಾಡಿದ ಚೀಲವನ್ನು ತೆರೆಯಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು. ಸದರಿ ಚೀಲವನ್ನು ತೆರೆದು ನೋಡಲಾಗಿ ಅದರಲ್ಲಿರುವ 68 ಟೆಟ್ರಾಪ್ಯಾಕೆಟ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. 1 ಎಂದು ಗುರುತಿಸಲಾಯಿತು. ಸದರಿ ಮು.ಮಾ. 1 ಇದ್ದ ಚೀಲದ ಮೇಲೆ ಅಂಟಿಸಲಾದ ಚೀಟಿಯನ್ನು

ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ. 2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಮು.ಮಾ. 2(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಆರೋಪಿ ಪರ ವಕೀಲರು ಆರೋಪಿ ಗೈರುಹಾಜರಿದ್ದು ಗುರುತಿಸುವಿಕೆಗೆ ತಕರಾರು ಇದೆ ಎಂದು ನುಡಿದ ಕಾರಣ ರೂ.300/- ದಂಡ ನೀಡುವ ಷರತ್ತಿಗೆ ಒಳಪಟ್ಟು ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.